**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಹಣಮಂತ ರುದ್ರಪ್ಪ ನಿರಾಣಿ, ಇವರ ಶೂನ್ಯ ವೇಳೆಯ ಪ್ರಸ್ತಾಪಕ್ಕೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಹೇಳಿಕೆ:**

**ವಿಷಯ:** ಕುಡಚಿ–ಬಾಗಲಕೋಟೆ ರೈಲು ಮಾರ್ಗದ ಅನುಷ್ಠಾನ ಕುರಿತಂತೆ ಶೂನ್ಯ ವೇಳೆ ಪ್ರಸ್ತಾವನೆ:-

ಈಗಾಗಲೇ ಕುಡಚಿ-ಬಾಗಲಕೋಟೆ ರೈಲು ಮಾರ್ಗದ ಕಾರ್ಯ ಪ್ರಾರಂಭವಾಗಿದ್ದು, ಅದರಲ್ಲಿ ಬಾಗಲಕೋಟೆ-ಖಜ್ಜಿದೋಣಿ ನಡುವೆ ಸುಮಾರು 30 ಕಿ.ಮೀ ಹೊಸ ಮಾರ್ಗ ಕಾರ್ಯಾರಂಭ ಮಾಡಿದೆ, ಕಲಾದಗಿಯಲ್ಲಿ ಈಗಾಗಲೇ ಸರಕುಗಳ ಗುಡ್ಸ್ ಶೆಡ್ ಸಹ ಕಾರ್ಯ ನಿರ್ವಹಿಸುತ್ತಿವೆ. ಖಜ್ಜಿದೋಣಿ-ಜಮಖಂಡಿ ವ್ಯಾಪ್ತಿಯ ಕಾಮಗಾರಿ ನಿರ್ಮಾಣಕ್ಕೆ ಟೆಂಡರ್ ಸಹ ಕರೆಯಲಾಗಿದೆ ಎಂದು ತಿಳಿದುಬಂದಿದೆ, ಉಳಿದಿರುವ ಜಮಖಂಡಿ-ತೇರದಾಳ ವಿಭಾಗದ ವ್ಯಾಪ್ತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಲು ರಾಜ್ಯ ಸರ್ಕಾರ ಮುಂದಾಗಬೇಕಿದೆ. ಹಾಗೂ ಬಾಗಲಕೋಟೆ-ಕುಡಚಿ ರೈಲ್ವೆ ಮಾರ್ಗಕ್ಕೆ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯವಿದ್ದು, ಈಗಾಗಲೇ ಕೆಲವು ಎಕರೆ ಜಮೀನು ಹಸ್ತಾಂತರವಾಗಿದ್ದು, ಉಳಿದ ಜಮೀನು ಸ್ವಾಧೀನ ಪ್ರಕ್ರಿಯೆಯು ಶೀಘ್ರದಲ್ಲಿ ಪೂರ್ಣಗೊಂಡರೆ ಆ ಭಾಗದ ಅನೇಕ ರೈತರು ಬೆಳೆದ ದವಸ-ಧಾನ್ಯಗಳನ್ನು ಬೇರೆ ರಾಜ್ಯಗಳಿಗೆ ಸರಕು ಮಾಡಿ ಆ ಭಾಗದ ರೈತರನ್ನು ಆರ್ಥಿಕವಾಗಿ ಸಧೃಢ ಮಾಡಿದಂತಾಗುತ್ತದೆ. ಹಾಗೂ ಈಗಾಗಲೇ ರೈಲ್ವೆ ಮಾರ್ಗಕ್ಕಾಗಿ ಭೂಮಿ ನೀಡಿದ ಸಂತ್ರಸ್ಥ ರೈತರ ಕುಟುಂಬಕ್ಕೆ ಸರ್ಕಾರಿ ಉದ್ಯೋಗವನ್ನು ನೀಡುವಂತೆ ವಿನಂತಿಸುತ್ತಾ ಬಂದಿದ್ದಾರೆ. ಹಾಗಾಗಿ ಅದರ ಬಗ್ಗೆ ಸರ್ಕಾರವು ವಿಶೇಷ ಕಾಳಜಿ ವಹಿಸಿ ಜಮೀನು ಕಳೆದುಕೊಂಡ ಸಂತ್ರಸ್ಥ ಕುಟುಂಬಕ್ಕೆ ಉದ್ಯೋಗ ನೀಡುವಂತೆ ಸಂತ್ರಸ್ಥರ ಪರವಾಗಿ ಸರ್ಕಾರಕ್ಕೆ ಆಗ್ರಹಿಸುತ್ತೇನೆ.

ಪ್ರಸ್ತುತ ಆ ಭಾಗದ ಸಾರ್ವಜನಿಕರು ಮತ್ತು ಹೋರಾಟಗಾರರು ತ್ವರಿತಗತಿಯ ಕಾಮಗಾರಿಗಾಗಿ ಪ್ರತಿಭಟನೆ ಮಾಡುತ್ತಿದ್ದು, ಖಜ್ಜಿದೋಣಿಯಿಂದ ಮುಂದಿನ ಮಾರ್ಗ ನಿರ್ಮಾಣವಾಗುವವರೆಗೂ ಕಲಾದಗಿ ರೈಲು ನಿಲ್ದಾಣದಲ್ಲಿನ ಸರಕು ಸಾಗಾಣಿಕೆಯನ್ನು ಸ್ಥಗಿತಗೊಳಿಸಬೇಕೆಂದು ಹೋರಾಟ ನಡೆಸುತ್ತಿದ್ದಾರೆ. ಆದ ಕಾರಣ ತ್ವರಿತಗತಿಯಲ್ಲಿ ಉಳಿದ ಕಾಮಗಾರಿಗಳನ್ನು ಶೀಘ್ರವೇ ಪ್ರಾರಂಭಿಸಲು ಸಂಬಂಧಪಟ್ಟ ಕೇಂದ್ರ ರೈಲ್ವೆ ಸಚಿವರು ಅಥವಾ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಆ ಭಾಗದ ಅನೇಕ ವರ್ಷದ ಕನಸು ನನಸು ಮಾಡುವಂತೆ ಮಾನ್ಯ ಮೂಲಭೂತ ಸೌಕರ್ಯಗಳ ಸಚಿವರಲ್ಲಿ ಹಾಗೂ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಒತ್ತಾಯಿಸುತ್ತೇನೆ.

*********

**ಉತ್ತರ:** ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗ ಯೋಜನೆ (142 ಕಿ.ಮೀ)ಯ ಕಾಮಗಾರಿಯ ವೆಚ್ಚದ ಶೇ.50ರಷ್ಟು ಹಾಗೂ ಭೂಸ್ವಾಧೀನ ವೆಚ್ಚದ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸಲು ಒಪ್ಪಿಗೆ ನೀಡಿ ಈ ಯೋಜನೆಗೆ ರಾಜ್ಯ ಸರ್ಕಾರದಿಂದ 2011ರಲ್ಲಿ ಅನುಮೋದನೆ ನೀಡಲಾಗಿದೆ.

- ಈ ಯೋಜನೆಯ ಕಾಮಗಾರಿಯ ಮೂಲ ಅಂದಾಜು ವೆಚ್ಚ ರೂ.816.14 ಕೋಟಿಗಳಾಗಿದ್ದು, ಇದರಲ್ಲಿ ರೈಲ್ವೆ ಇಲಾಖೆಯ ಪಾಲು ರೂ.408.07 ಕೋಟಿಗಳಾಗಿದ್ದು, ರಾಜ್ಯ ಸರ್ಕಾರದ ಪಾಲು ರೂ.408.07 ಕೋಟಿಗಳಾಗಿರುತ್ತದೆ.
- 2022-23ನೇ ಸಾಲಿನಲ್ಲಿ ಯೋಜನೆಯ ಅಂದಾಜು ಪರಿಷ್ಕರಿಸಿದ್ದು, ಈ ಪರಿಷ್ಕರಣೆ ಅನುಸಾರ ವೆಚ್ಚ ರೂ.1530.09 ಕೋಟಿಗಳಾಗಿದ್ದು, ಇದರಲ್ಲಿ ರೈಲ್ವೆ ಇಲಾಖೆಯ ಪಾಲು ರೂ.926.31 ಕೋಟಿಗಳಾಗಿದ್ದು, ರಾಜ್ಯ ಸರ್ಕಾರದ ಪಾಲು ರೂ.603.78 ಕೋಟಿಗಳಾಗಿರುತ್ತದೆ.

...2)

- ಈ ಯೋಜನೆಗೆ ಬೇಕಾಗಿರುವ ಭೂಮಿಯನ್ನು ರಾಜ್ಯ ಸರ್ಕಾರದ ಪೂರ್ಣ ವೆಚ್ಚದಲ್ಲಿಯೇ ಭೂಸ್ವಾಧೀನಪಡಿಸಿಕೊಂಡು ರೈಲ್ವೆಗೆ ಉಚಿತವಾಗಿ ಹಸ್ತಾಂತರಿಸಲಾಗುತ್ತಿದೆ.

**ಭೂಸ್ವಾಧೀನ ಪರಿಹಾರಕ್ಕಾಗಿ ರಾಜ್ಯ ಸರ್ಕಾರದಿಂದ ಒದಗಿಸಿದ ಅನುದಾನದ ವಿವರ:-**

(ರೂ.ಕೋಟಿಗಳಲ್ಲಿ)

| ಜಿಲ್ಲಾಡಳಿತ | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ |
|---|---|---|
| ಬೆಳಗಾವಿ | 191.98 | 130.08 |
| ಬಾಗಲಕೋಟೆ | 395.67 | 395. 67 |
| **ಒಟ್ಟು** | 587.65 | 525.75 |

**ನಿರ್ಮಾಣ ಕಾಮಗಾರಿಗಾಗಿ ರಾಜ್ಯ ಸರ್ಕಾರ ಹಾಗೂ ರೈಲ್ವೆ ಇಲಾಖೆಯಿಂದ ಒದಗಿಸಿರುವ ಅನುದಾನದ ವಿವರ:-**

(ರೂ.ಕೋಟಿಗಳಲ್ಲಿ)

| ರಾಜ್ಯ ಸರ್ಕಾರಿಂದ ಬಿಡುಗಡೆಯಾದ ಮೊತ್ತ | ನೈರುತ್ಯ ರೈಲ್ವೆಯಿಂದ ಬಿಡುಗಡೆಯಾದ ಮೊತ್ತ | ಒಟ್ಟು | ವೆಚ್ಚ |
|---|---|---|---|
| 195.65 | 669.00 | 864.65 | 353.5 |

**ನೈರುತ್ಯ ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಪ್ರಕಾರ ಪ್ರಸ್ತುತ ಈ ಯೋಜನೆಯ ಪ್ರಗತಿ ಈ ಕೆಳಕಂಡಂತಿದೆ :**

1. ಈ ಯೋಜನೆಗೆ ಒಟ್ಟು 2517.39 ಎಕರೆ ಜಮೀನು ಅಗತ್ಯವಿದ್ದು, ಇದುವರೆಗೂ 2481.17 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಬಾಕಿ 21.15 ಎಕರೆ ಜಮೀನಿನ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಈ ನೂತನ ರೈಲು ಮಾರ್ಗದ ಕ್ಷಿಪ್ರ ಅನುಷ್ಠಾನಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಂಡು ಶೇಕಡ 95%ಕ್ಕೂ ಹೆಚ್ಚು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.
2. ಬಾಗಲಕೋಟೆ-ಖಜ್ಜಿಡೋಣಿ (30ಕಿ.ಮೀ) ಕಾಮಗಾರಿಯು 2018ರಲ್ಲಿ ಪೂರ್ಣಗೊಂಡಿದ್ದು, ರೈಲು ಸಂಚಾರ ಪೂರ್ಣಗೊಂಡಿದೆ.
3. ಖಜ್ಜಿಡೋಣಿ-ಲೋಕಾಪುರ (9 ಕಿ.ಮೀ) ಸೆಕ್ಷನ್ ಕಾಮಗಾರಿಯು ಪ್ರಗತಿಯಲ್ಲಿದ್ದು, 2023ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.
4. ಲೋಕಾಪುರ–ಯಾದವಾಡ (21 ಕಿ.ಮೀ) ಸೆಕ್ಷನ್‌ನ ಕಾಮಗಾರಿಗಾಗಿ ಮೇ 2023ರಲ್ಲಿ ಟೆಂಡರ್ ಕರೆಯಲಾಗಿದೆ.
5. ಯಾದವಾಡ-ಜಗದಾಲ್ ರಸ್ತೆ (45 ಕಿ.ಮೀ) ಸೆಕ್ಷನ್‌ನ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿಗಾಗಿ ರೈಲ್ವೆ ಇಲಾಖೆಯಿಂದ ಆಗಸ್ಟ್ 2023ರಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ.
6. ಜಗದಾಲ್ ರಸ್ತೆ- ಹಾರೂಗೇರಿ-ಕುಡಚಿ (37 ಕಿ.ಮೀ) ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಜಮೀನು ಹಸ್ತಾಂತರವಾದ ನಂತರ ಕಾಮಗಾರಿಗಾಗಿ ಟೆಂಡರ್ ಕರೆಯಲಾಗುವುದು.

...3)

**ನೈರುತ್ಯ ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಅನುಸಾರ ಈ ಕೆಳಕಂಡ ಕಾರಣಗಳಿಂದ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.**

1) ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಒತ್ತಾಯದ ಮೇರೆಗೆ ಬಾಗಲಕೋಟೆ ಜಿಲ್ಲೆಯ ಲೋಕಾಪುರ ಬಳಿಯ ಹಳಿಯ ಮಾರ್ಗವನ್ನು (ಅಲೈನ್‌ಮೆಂಟ್) 3 ಬಾರಿ ಮಾರ್ಪಡಿಸಿರುವುದು ಹಾಗೂ ಗಣಿ ಮಾಲೀಕರು ನೀಡಿರುವ ಕೋರಿಕೆಯ ಮೇರೆಗೆ ಲೋಕಾಪುರ ಬಳಿ ಖಜ್ಜಿದೋಣಿ-ಯಾದವಾಡ ನಡುವಿನ ಸುಣ್ಣದ ಕಲ್ಲು ಮತ್ತು ಡಾಲಮೈಟ್ ಗಣಿಗಳು ಹಾದು ಹೋಗುತ್ತಿದ್ದು, ಇದನ್ನು ತಪ್ಪಿಸಲು ಸುಮಾರು 2.1/2 ವರ್ಷಗಳು ವಿಳಂಬವಾಗಿರುತ್ತದೆ.
2) 2013ರಲ್ಲಿ ಜಾರಿಯಾದ ನೂತನ ಭೂಸ್ವಾಧೀನ ಕಾಯ್ದೆಯನುಸಾರ ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಬೇಕಾದದ್ದು.
3) ಭೂಸ್ವಾಧೀನ ಪ್ರಕ್ರಿಯೆ ಕುರಿತಂತೆ ನ್ಯಾಯಾಲಯಗಳಲ್ಲಿ ಹೂಡಲಾಗುವ ಮೊಕದ್ದಮೆಗಳಿಂದ ಭೂಸ್ವಾಧೀನ ಪ್ರಕ್ರಿಯೆ ವಿಳಂಬಗೊಳ್ಳುವುದು.
4) ತೇರದಾಳ ಗ್ರಾಮದ 61-06-04 ಎಕರೆ ಹಾಗೂ ಸಾಸಲಟ್ಟಿ ಗ್ರಾಮದ 13-30-07 ಎಕರೆ ಈ ಎರಡು ಗ್ರಾಮದ ಒಟ್ಟು 74-36 ಎಕರೆಗಳಿಗೆ ರಚಿಸಿರುವ ಐತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ.
5) ಈ ಯೋಜನೆಗಳನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಪರ ಮುಖ್ಯ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ನೇತೃತ್ವದಲ್ಲಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಗುತ್ತಿದೆ ಹಾಗೂ ಯೋಜನೆಗಳ ಅನುಷ್ಠಾನಕ್ಕಾಗಿ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಸೂಕ್ತ ನಿರ್ದೇಶನ ನೀಡಲಾಗುತ್ತಿದೆ.

ಈ ಯೋಜನೆಯನ್ನು 2027ರೊಳಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ.

**ಉದ್ಯೋಗ:-** ಮಾನ್ಯ ಕೇಂದ್ರ ರೈಲ್ವೆ ಮಂತ್ರಾಲಯವು ತನ್ನ ಪತ್ರ ಸಂಖ್ಯೆ:E(NG)II/2010/RC-5/1, ದಿನಾಂಕ:11.11.2019 ರಲ್ಲಿ ಈ ಕೆಳಕಂಡಂತೆ ತಿಳಿಸಿದೆ.

"Right to Fair Compensation and Transparency in Land Acquisition, Rehabilitation and Resettlement Act 2013 (Removal of Difficulties) Order Serial No.4 were examined by Ministry of Railways and it has been decided that:-

i. Ministry of Railways earlier policy of offering appointment in railways to affected land losers issued vide reference above is withdrawn and circular issued in this regard vide reference above stands superseded.

ಮೂಅಇ 145 ರಾರಾಹೆ 2023/ಇ

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು